# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೮೬೭
http://www.kasapa.in e-mail : kannadaparishattu@gmail.com

ಕ್ರಮಸಂಖ್ಯೆ : ಕಸಾಪ / **ಪ್ರಕಟಣೆ**/ ೨೦೨೨–೨೩ ದಿನಾಂಕ : ೨೫-೧೦–೨೦೨೨

*ಇವರಿಗೆ*
**ಸಂಪಾದಕರು / ಮುಖ್ಯ ವರದಿಗಾರರು**
..................................................ಬೆಂಗಳೂರು

**ಪ್ರಕಟಣೆಯ ಕೃಪೆಗಾಗಿ**

## ಮಾದರಿ ಮೈಸೂರನ್ನು ರೂಪಿಸಿದ ಸರ್. ಮಿರ್ಜಾ ಇಸ್ಮಾಯಿಲ್

## - ನಾಡೋಜ. ಡಾ.ಮಹೇಶ ಜೋಶಿ

ಬೆಂಗಳೂರು: "**ಕೃಷ್ಣರಾಜ ಒಡೆಯರಂತಹ ದೊರೆಯಿಲ್ಲ, ಮಿರ್ಜಾ ಇಸ್ಮಾಯಿಲ್‌ರಂತಹ ಮಂತ್ರಿ ಇಲ್ಲ**" ಎನ್ನುವ ಗಾದೆ ಮಾತು **ದಿವಾನ್ ಮಿರ್ಜಾ ಇಸ್ಮಾಯಿಲ್** ಅವರ ಕಾಲದಲ್ಲಿ ಜನಜನಿತವಾಗಿತ್ತು. ಮಿರ್ಜಾ ಇಸ್ಮಾಯಿಲ್ ಅವರ ಅತ್ಯಂತ ಆದರ್ಶವಾದ ಗುಣವೆಂದರೆ ಅವರ ಸೌಜನ್ಯ ವಿನಯ ಹಾಗೂ ಕಾರ್ಯತತ್ಪರತೆ. ಇದೇ ಕಾರಣಕ್ಕೆ ಅವರು ಎಲ್ಲ ಜನರ ಮನಸ್ಸನ್ನು ಗೆದ್ದುಕೊಂಡಿದ್ದರು. ಇವತ್ತು ಮೈಸೂರು ನಗರವನ್ನು ಅತ್ಯಂತ ಸುಂದರ ನಗರವಾಗುವುದಕ್ಕೆ ಮಿರ್ಜಾ ಇಸ್ಮಾಯಿಲ್ ಅವರೇ ಕಾರಣ ಎಂದು **ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ ಜೋಶಿ** ಅಭಿಪ್ರಾಯ ಪಟ್ಟರು.

ಅವರು ಇಂದು ಚಾಮರಾಜ ಪೇಟೆಯಲ್ಲಿ ಇರುವ **ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿರುವ ಪರಿಷತ್ತಿನ ಆಧಾರ ಸ್ಥಂಭಗಳಲ್ಲಿ ಪ್ರಮುಖರಾದ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಅವರ ೧೩೬ ನೆಯ ಜನ್ಮದಿನಾಚರಣೆ** ಸಮಾರಂಭದಲ್ಲಿ ಮಾತನಾಡಿದರು.

ಸರ್ ಮಿರ್ಜಾ ಇಸ್ಮಾಯಿಲ್ ಅವರು ಪರ್ಷಿಯಾ ಮೂಲದವರಾದರೂ ಕನ್ನಡದ ಮೇಲೆ ಅಪಾರ ಗೌರವ ಹೊಂದಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಬೆಳೆಯುವಲ್ಲಿ ಅವರ ಪಾತ್ರ ಪ್ರಮುಖವಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ತಿಗೆ ಸ್ಥಳದ ಅವಶ್ಯಕತೆ ಇದೆ ಎಂದಾಗ ಕನ್ನಡ ಸಾಹಿತ್ಯ ಪರಿಷತ್ತು ಇರುವ ಈಗಿನ ಜಾಗವನ್ನು ಉಚಿತವಾಗಿ ನೀಡಿ, "**ಕನ್ನಡ ತಾಯಿಯ ದೇಗುಲ ಇಲ್ಲಿ ಸಿದ್ಧವಾಗಲಿ**" ಎಂಬ ಮಾತನ್ನು ಹೇಳಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕನ್ನಡ ಸಂಘಗಳು "**ಕನ್ನಡದ ಅರಿವನ್ನು ಬೆಳಗುವ ನಂದಾ ದೀಪಗಳು**" ಎಂದು ಬಣ್ಣಿಸಿದ್ದರು. ಮಿರ್ಜಾ ಅವರು ಸೋಮಾರಿತನ ಮತ್ತು ಲಂಚಗುಳಿತನಕ್ಕೆ ವಿರೋಧಿಸಿ ದಕ್ಷತೆಗೆ ಸದಾ ಪ್ರೋತ್ಸಾಹಿಸುತ್ತಿರುವದನ್ನು **ನಾಡೋಜ ಡಾ. ಮಹೇಶ ಜೋಶಿ** ನೆನಪಿಸಿಕೊಂಡರು.

ಸರ್ ಮಿರ್ಜಾ ಇಸ್ಮಾಯಿಲ್ ಅವರ ಕುರಿತು ಉಪನ್ಯಾಸವನ್ನು ನೀಡಲು ಆಗಮಿಸಿದ್ದ ಜೆ.ಎಸ್.ಎಸ್. ಮಹಾವಿದ್ಯಾಲಯ ನಿವೃತ್ತ ಪ್ರಾಂಶುಪಾಲರಾದ **ಪ್ರೊ. ಚಂದ್ರಶೇಖರ ಉಪಾಲ** ಮಾತನಾಡಿ ಮಿರ್ಜಾ ಇಸ್ಮಾಯಿಲ್ ಅವರು ತಮ್ಮೊಂದಿಗೆ ಎಲ್ಲರೂ ಬೆಳೆಯಬೇಕು, ಎನ್ನುವ ಭಾವನೆ ಹೊಂದಿದ್ದರು. ಅವರ ದೂರದೃಷ್ಟಿಯ ಪ್ರತೀಕವಾಗಿ ಮೈಸೂರು ಸಂಸ್ಥಾನ ಜಗತ್ತಿನ ಮಾದರಿ ಸಂಸ್ಥಾನ ಎಂದು ಹೆಸರಾಗಿತ್ತು. ಹಿಂದೆ೧೯೩೮ ರಲ್ಲಿ ಮಹಾತ್ಮಾಗಾಂಧಿಯವರಿಂದ ರಾಜರ್ಷಿ ಎಂದು ಕರೆಸಿಕೊಂಡಿದ್ದ ನಾಲ್ವಡಿಯವರಿಗೆ ಬೆನ್ನೆಲುಬಾಗಿ ನಿಂತವರು ಮಿರ್ಜಾ ಇಸ್ಮಾಯಿಲ್ ಅವರು. ಮೈಸೂರು ಸಂಸ್ಥಾನದ ಏಳಿಗೆಯ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡವರು

ದಿವಾನರು. ಸರ್.ಎಂ. ವಿಶ್ವೇಶ್ವರಯ್ಯನವರು ಕಂಡ ಎಲ್ಲಾ ಕನಸುಗಳನ್ನು ನನಸು ಮಾಡುವ ಜವಾಬ್ದಾರಿ ವಹಿಸಿಕೊಂಡವರೇ ದಿವಾನ್ ಸರ್.ಎಂ. ಮಿರ್ಜಾ ಇಸ್ಮಾಯಿಲ್ ಅವರು ಎಂದು **ಪ್ರೊ. ಚಂದ್ರಶೇಖರ ಉಷಾಲ** ಹೇಳಿದರು.

ನೀರಾವರಿ, ಕೃಷಿ, ಕೈಗಾರಿಕೆಯ ಯೋಜನೆಗಳನ್ನು ಮೈಸೂರಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ನಾಡನ್ನು ಮಾದರಿ ಮಾಡಿದ್ದರು. ಸೌಂಧರ್ಯದ ಕುರಿತು ಅತಿಯಾದ ಆಸಕ್ತಿ ಹೊಂದಿದ ಅವರ ದೂರ ದೃಷ್ಟಿಯ ಪರಿಣಾಮವೇ ಬೃಂದಾವನ ಗಾರ್ಡನ್ ತಲೆ ಎತ್ತಿದ್ದು. ಅಸಾಧಾರಣವಾದ ದೂರ ದೃಷ್ಟಿತ್ವ ಹೊಂದಿದ್ದ ಮಿರ್ಜಾ ಅವರು ಭಾರತ ಇಬ್ಭಾಗವಾಗುವುದನ್ನು ಇಷ್ಟ ಪಡದೆ ಸೌಮ್ಯವಾಗಿ ಅದನ್ನು ವಿರೋಧಿಸಿ ಅಖಂಡ ಭಾರತ ಇರಬೇಕು ಎನ್ನುವ ಕನಸನ್ನು ಕಂಡಿದ್ದರು. ಜೀವನದ ಕೊನೆಯ ಕಾಲದಲ್ಲಿ ಹೈದರಾಬಾದಗೆ ಬಂದ ಮಿರ್ಜಾ ಅವರು ಅಲ್ಲಿಯ ಸ್ಥಿತಿ ಕಂಡು ಒಂದು ಹಂತದಲ್ಲಿ ಭ್ರಮ ನಿರಸನಗೊಂಡಿದ್ದರು. ನಾಡು ಕಂಡ ಅಪ್ರತಿಮ ರಾಷ್ಟ್ರಭಕ್ತರಾದ ಇಸ್ಮಾಯಿಲ್ ಅವರು ದೈವಾಧಿನರಾದಾಗ ಜಾತಿ ಧರ್ಮ ಮರೆತು ಜನರು ಕಣ್ಣಿರು ಹಾಕಿದ್ದನ್ನು **ಡಿ.ವಿ.ಜಿ ಅವರು ತಮ್ಮ 'ಜ್ಞಾಪಕ ಚಿತ್ರಶಾಲೆ'** ಪುಸ್ತಕದಲ್ಲಿ ಬರೆದಿದ್ದಾರೆ ಎಂದು ಅವರು ಸ್ಮರಿಸಿದರು.

**ಹಿರಿಯ ಸಾಹಿತಿ ಅಬ್ದುಲ್ ಬಷೀರ್** ಮಾತನಾಡಿ ಮಿರ್ಜಾ ಇಸ್ಮಾಯಿಲ್ ಅವರಿಗೆ ಕಾಶ್ಮೀರದ ಮುಖ್ಯಮಂತ್ರಿಯಾಗುವ ಅವಕಾಶ ಬಂದಾಗ ಅವದನ್ನು ಗೌರವ ಪೂರ್ವಕವಾಗಿ ತಿರಸ್ಕರಿಸಿದ್ದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೂಗರ್ಭ ಶಾಸ್ತ ವಿಷಯದಲ್ಲಿ ಕಲಿತ ಮಿರ್ಜಾ ಅವರು ಯಾವುದೇ ಶಿಕ್ಷಕರು ಕಂಡರೂ ಗೌರವದಿಂದ ನಮಿಸುತ್ತಿದ್ದರು. ಆಗಿನ ಮೈಸೂರು ಸಂಸ್ಥಾನದಲ್ಲಿ ಆರಂಭಿಸಲಾಗುವ ಎಲ್ಲಾ ಕೈಗಾರಿಕೆಗಳು ಒಂದೇ ಕಡೆ ಇರಬಾರದು ಎನ್ನುವ ಮೂಲ ಉದ್ದೇಶವನ್ನು ತಿಳಿಸಿ ನಾಡಿನ ಎಲ್ಲಾ ಮೂಲೆ ಮೂಲೆಗಳಲ್ಲಿ ಕೈಗಾರಿಗೆಳು ಇರಬೇಕು ಎನ್ನುವ ವಿಕೇಂದ್ರಿಕರಣದ ಉದ್ದೇಶವನ್ನು ಇಟ್ಟುಕೊಂಡಿದ್ದರು ಎಂದರು

**ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ನೇ.ಭ. ರಾಮಲಿಂಗಶೆಟ್ಟಿ ಅವರು ಸ್ವಾಗತಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ಕೆ. ಮಹಾಲಿಂಗಯ್ಯ ವಂದಿಸಿದರು. ಗೌರವ ಕೋಶಾಧ್ಯಕ್ಷರಾದ ಶ್ರೀ ಬಿ.ಎಂ. ಪಟೇಲ್‌ಪಾಂಡು ಕಾರ್ಯಕ್ರಮ ನಿರ್ವಹಿಸಿದರು**.

ಛಾಯಾಚಿತ್ರ : ಚಾಮರಾಜ ಪೇಟೆಯಲ್ಲಿ ಇರುವ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಪರಿಷತ್ತಿನ ಆಧಾರ ಸ್ಥಂಭಗಳಲ್ಲಿ ಪ್ರಮುಖರಾದ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಅವರ ೧೩೭ ನೆಯ ಜನ್ಮದಿನಾಚರಣೆ ಸಮಾರಂಭದಲ್ಲಿ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಅವರ ಭಾವಚಿತ್ರಕ್ಕೆ ಗಣ್ಯರಿಂದ ಗೌರವ ಸಮರ್ಪಣೆ

**ಶ್ರೀನಾಥ್ ಜೆ.**
ಮಾಧ್ಯಮ ಸಲಹೆಗಾರರು
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.